# ಗ್ಲೋ ಆರ್ಟ್ ಪ್ರವೀಣ



**ಕತ್ತಲೆಯಲ್ಲಿ ಟಾರ್ಚ್ ಲೈಟ್‌ನಿಂದ ಪರದೆಯ ಮೇಲೆ ಚಿತ್ರ ಮೂಡಿಸುವ ವಿಶಿಷ್ಟ ಕಲೆ 'ಗ್ಲೋ ಆರ್ಟ್'. ಇದನ್ನು ದೇಶ ವಿದೇಶಗಳಲ್ಲಿ ಪ್ರದರ್ಶಿಸಿ ಸೈ ಎನಿಸಿಕೊಂಡವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಭೈರುಂಬೆಯ ವಿನಯ ಗಡಿಕೈ.**

■ ಚಿತ್ರ ಬರಹ:
**ಗಣಪತಿ ಹಾಸ್ಪುರ**



ಪ್ರತಿಯೊಬ್ಬರಲ್ಲಿಯೂ ಒಂದೊಂದು ಪ್ರತಿಭೆಯಿರುತ್ತದೆ. ಅವರಲ್ಲಿ ಅಡಕವಾಗಿರುವ ಸೃಜನಶೀಲ ಕಲೆಗೆ ಸೂಕ್ತ ಸಮಯದಲ್ಲಿ, ವ್ಯವಸ್ಥಿತವಾದ ಮಾರ್ಗದರ್ಶನ ಲಭಿಸಿದರೆ ಮಾತ್ರ ಆ ಕಲಾ ಪ್ರತಿಭೆ ಸಮಾಜದಲ್ಲಿ ಅರಳಲು ಸಾಧ್ಯ. ವಿನಯ ಹೆಗಡೆ ಗಡಿಕೈ ಕಲಾಮಾಧ್ಯಮದಲ್ಲಿ ಮಿಂಚುತ್ತಿರುವ ಪ್ರತಿಭಾವಂತ.

ಇವರು ಶಿರಸಿ ತಾಲೂಕಿನ ಭೈರುಂಬೆ ಸನಿಹದ ಗಡಿಕೈನವರು. ತುಂಬಿದ ಕುಟುಂಬದಲ್ಲಿ, ಕೃಷಿಯನ್ನೇ ಉಸಿರಾಗಿಸಿಕೊಂಡ ಸಂಸಾರದಲ್ಲಿ ಜನಿಸಿದವರು. ಬಾಲ್ಯದಲ್ಲಿಯೇ ಸಂಗೀತ, ಯಕ್ಷಗಾನ ಕಲೆಯ ಸೆಳೆತಕ್ಕೆ ಮರುಳಾದರೂ 'ಚಿತ್ರಕಲೆ' ಮತ್ತು 'ಶಿಲ್ಪಕಲೆ'ಯು ಈ ತರುಣನ ಅಂತರಂಗದಲ್ಲಿ ಹೆಪ್ಪುಗಟ್ಟಿತ್ತು. ಪ್ರಾಥಮಿಕ ವಿದ್ಯಾಭ್ಯಾಸ ತರುವಾಯ ಬೆಂಗಳೂರಿನ 'ಕೆನ್ ಕಲಾ ಶಾಲೆ'ಯಲ್ಲಿ ಚಿತ್ರಕಲೆ ಮತ್ತು ಪೇಂಟಿಂಗ್‌ನಲ್ಲಿ ತರಬೇತಿಯನ್ನು ಪಡೆದುಕೊಂಡರು. ಸಂಗೀತದ ಬಗ್ಗೆಯೂ ಬಹಳ ಆಸಕ್ತಿಯನ್ನು ಹೊಂದಿದ್ದ ಈ ಬಾಲಕ ವಿನಯ ಅವರು ಬನಾರಸ್‌ನ ಪದ್ಮ ವಿಭೂಷಣ ಪಂಡಿತ್ ಕಿಶನ್ ಮಹಾರಾಜ ಅವರಲ್ಲಿ ತಬಲಾ ವಾದನವನ್ನು ಅಭ್ಯಾಸ ಮಾಡಿದ್ದಾರೆ. ಆಮೇಲೆ ಎಸ್. ಕೆ. ರಾಮಚಂದ್ರ ಅವರಲ್ಲಿ ಸುಮಾರು ಆರು ವರ್ಷಗಳ ಕಾಲ 'ಶಿಲ್ಪ ಶಾಸ್ತ್ರ' ಪಾಠದ ಜೊತೆಗೆ 'ಕಾವ್ಯಾ'ದಿಗಳ ಪಾಠವನ್ನು ಅಧ್ಯಯನ ಮಾಡಿದರು.

ವಿನಯ ಹೆಗಡೆ ಅವರು ಕಲಾ ಶಾಲೆಯಲ್ಲಿ ಇರುವಾಗಲೇ ಮಣ್ಣು, ಕಲ್ಲು, ಶಿಲೆ, ಲೋಹ, ಮರ, ಫೈಬರ್, ಗ್ಲಾಸ್, ಪ್ಲಾಸ್ಟಿಕ್ ಆಫ್ ಪ್ಯಾರಿಸ್‌ಗಳಲ್ಲಿ ಅತ್ಯಾಕರ್ಷಕವಾದ ಕಲಾಕೃತಿಗಳನ್ನು ರಚಿಸುವಷ್ಟು ಸಾಮರ್ಥ್ಯವನ್ನು ಹೊಂದಿದ್ದರು. ಅಲ್ಲದೆ ಕುಂಚದಿಂದಲೂ ವಿಭಿನ್ನವಾದ ಚಿತ್ರಗಳನ್ನು ತಮ್ಮ ಕೌಶಲ್ಯದಿಂದ ಚಿತ್ರಿಸುವಲ್ಲಿ ಇವರು ಸಿದ್ಧಹಸ್ತರಾಗಿದ್ದರು. ಅಲ್ಲದೇ ಇಂದಿನ ಡಿಜಿಟಲ್ ಮಾಧ್ಯಮದ ಕಲೆಯನ್ನೂ ಅಧ್ಯಯನ ಮಾಡಬೇಕೆಂಬ ಸದುದ್ದೇಶದಿಂದ ಕೆನಡಾದ 'ವ್ಯಾಂಕೋವರ್‌ನ ಫಿಲ್ಮ್ ಸ್ಕೂಲ್'ನಲ್ಲಿ ಅನಿಮೇಶನ್ ಟೆಕ್ನಾಲಜಿ ಎನ್ನುವ ಪದವಿಯನ್ನು ಗಿಟ್ಟಿಸಿಕೊಂಡರು. ಸಿಂಗಾಪುರದಲ್ಲಿ 'ಲೂಕಾಸ್ ಅನಿಮೇಶನ್‌ನಿಂದ ಜೆಡಿ ಮಾಸ್ಟರ್ ಡಿಗ್ರಿಯನ್ನು ಪಡೆದಿರುವ ವಿನಯ ಹೆಗಡೆ ಸದ್ಯ ಬೆಂಗಳೂರಿನಲ್ಲಿ ಡ್ರೀಮ್ ವರ್ಕ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಸಂಪ್ರದಾಯವನ್ನು ಅಚ್ಚುಕಟ್ಟಾಗಿ ಪಾಲಿಸುವ ಕಲಾವಿದರಾಗಿ ಗುರುತಿಸಿಕೊಂಡಿರುವ ಇವರು ಆಧುನಿಕ ಜಗತ್ತಿನ ಬದಲಾವಣೆಗಳಿಂದಾಗಿ ರೂಪುಗೊಂಡ ಹೊಸ ಸಂಶೋಧನೆಗಳತ್ತ ಹೆಜ್ಜೆ ಹಾಕಿದವರು. ಅಂದರೆ ಕತ್ತಲೆಯಲ್ಲಿ ಟಾರ್ಚ್ ಲೈಟ್‌ನಿಂದ ಪರದೆಯ ಮೇಲೆ ಚಿತ್ರ ಮೂಡಿಸುವ 'ಗ್ಲೋ ಆರ್ಟ್' ಅನ್ನು ದೇಶ ವಿದೇಶಗಳಲ್ಲಿ ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾರೆ. ಈಗ ಕಲಾ ಪ್ರಕಾರದಲ್ಲಿಯೇ ಹೊಸದಾಗಿರುವ ಜಗತ್ತಿನಲ್ಲಿಯೇ ಮೊದಲ ಆವಿಷ್ಕಾರ 'ಕಾಸ್ಮಿಕ್ ಸ್ಲ್ಯಾಶ್' ಅನ್ನು ಶೋಧಿಸಿದ ಹೆಗ್ಗಳಿಕೆ ಇವರದ್ದು.

## ಏನಿದು ಕಾಸ್ಮಿಕ್ ಸ್ಲ್ಯಾಶ್?

ಇದು ವಿವಿಧ ಕಲೆಯನ್ನು ಪ್ರೋತ್ಸಾಹಿಸುವವರಿಗೆ ಅಷ್ಟೇ ಅಲ್ಲ; ಕಲೆಯನ್ನೇ ಉಸಿರಾಗಿಸಿಕೊಂಡವರಿಗೂ ಆಶ್ಚರ್ಯವಾಗುವಂತಹ ಸಂಗತಿ. ಇದೊಂದು ಅಪರೂಪವಾದಂತಹ ಕಲಾ ಮಾಧ್ಯಮ! ಈ ಕಲಾ ಮಾಧ್ಯಮದಲ್ಲಿ ಪರದೆಯಿಲ್ಲ, ಬ್ರಶ್ ಉಪಯೋಗವೇ ಇಲ್ಲಾ. ಬರೆದ (ಚಿತ್ರಿಸಿದ) ಚಿತ್ರಕ್ಕೆ ಕಾಲ ಮಿತಿಯೂ ಇಲ್ಲ.. ಗಾಳಿಯಲ್ಲಿ ಬಣ್ಣದ ಚಿತ್ತಾರ ಬರೆಯುವ ವಿಶಿಷ್ಟವಾದ ಕಲೆ. ಅಂದರೆ ಗಾಳಿಯಲ್ಲಿ ಕೈಯಾಡಿಸುತ್ತ ಚಿತ್ರ ಬಿಡಿಸುವುದು. ಅಲ್ಲದೆ 'ವರ್ಚುವಲ್ ರಿಯಾಲಿಟಿ ತಂತ್ರಜ್ಞಾನ'ದ ಸಹಾಯದಿಂದ ಎಲ್ಲಿಯೋ ಚಿತ್ರಿಸುವ ಚಿತ್ರ, ಪರದೆಯ ಮೇಲೆ ಅಚ್ಚಾಗಿ ನಮಗೆಲ್ಲಾ ಅತ್ಯಾಶ್ಚರ್ಯವಾಗುವ ರೀತಿಯಲ್ಲಿ ಗೋಚರವಾಗುವುದೇ ಈ ಕಲೆಯ ವೈಶಿಷ್ಟ್ಯ.

ಈ ಕಾಸ್ಮಿಕ್ ಸ್ಲ್ಯಾಶ್ ಕಲಾ ಮಾಧ್ಯಮಕ್ಕೆ ಆಕಾಶವೇ ಕ್ಯಾನ್ವಾಸ್! ಆಕಾಶವೇ ಪರದೇ ಆಗಿರುವುದರಿಂದ ಚಿತ್ರ ಬಿಡಿಸುವ ಕಲಾವಿದನಿಗೆ ವಿಫಲವಾದ ಅವಕಾಶಗಳು ಇರುತ್ತವೆ. ಗಾಳಿ ಎಂಬ ಪರದೆಯಲ್ಲಿ ಕೈ ತಿರುಗಿಸಿ 'ಚಿತ್ರ' ಬಿಡಿಸುತ್ತಿದ್ದರೂ ಅದು ನಿಜವಾಗಿಯೂ ಅಚ್ಚಾಗುವುದು ಪರದೆಯ ಮೇಲೆಯೇ! ಅಂದ್ರೆ ಈ ಮಾಧ್ಯಮದಲ್ಲಿ ಕಲಾವಿದ ವಿಭಿನ್ನವಾದ ಚಿತ್ರಗಳನ್ನು ಸುಂದರವಾಗಿ ಚಿತ್ರಿಸಲು ಶುರು ಮಾಡಿದರೂ ಅದು ಡಿಜಿಟಲ್ ಸಿಗ್ನಲ್ ತಾಂತ್ರಿಕತೆಯ ಸಹಾಯದಿಂದ ಪರದೆಯ ಮೇಲೆಯೇ ಮೂಡುತ್ತದೆ. ಈ ಹೊಸ ಬಗೆಯ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಕಲಾ ಮಾಧ್ಯಮದಲ್ಲಿಯೇ ಹೊಸದಾಗಿರುವ ಈ ವಿನೂತನವಾದ ಕಲೆಯನ್ನು ಪರಿಚಯಿಸಿದ ಹೆಗ್ಗಳಿಕೆ ವಿನಯ ಹೆಗಡೆ ಅವರದ್ದು. ಹೀಗೂ ಚಿತ್ರ ಬಿಡಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in